ದಿನಾಂಕ 06-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದು ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-</u>**

6. ನನಗಿಂತ ಮುಂಚೆಯೇ ಆರೋಪಿ ಕರ್ತವ್ಯದಲ್ಲಿದ್ದರು. ಆತ ಒಳ್ಳೆಯ ಕೆಲಸಗಾರ ಎಂದು ನಿಮ್ಮ ಇಲಾಖೆಯವರು ಅವಾರ್ಡ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

7. ನಾನು ಸಿಂಧನೂರಿಗೆ ಬರುವ ಮುಂಚೆ ಮುನಿರಾಬಾದ್ ನಲ್ಲಿ ಕೆಲಸ ಮಾಡಿದ್ದೇನೆ. ಗಂಗಾವತಿಯಲ್ಲಿ 1991 ರಿಂದ 1997 ರವರೆಗೆ ಕೆಲಸ ಮಾಡಿದ್ದೇನೆ. ಅಲ್ಲಿ ನಾನು ಮೀಟರ್ ಟೆಸ್ಟರ್ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ಚಿನಿವಾಲರ ರೈಸ್ ಮಿಲ್ಲನ್ನು ಪರಿಶೀಲನೆ ಮಾಡಲು ಹೋಗಿದ್ದಿರಿ ಎಂದರೆ ಸಾಕ್ಷಿಯು ಬಹಳಷ್ಟು ಕಡೆ ತಪಾಸಣೆಗೆ ಹೋಗಿದ್ದೇನೆ, ನಿಖರವಾಗಿ ನೆನಪಿಲ್ಲ ಎನ್ನುತ್ತಾರೆ. ನಿಮ್ಮನ್ನು ಸದರಿ ರೈಸ್ ಮಿಲ್‌ನವರಿಗೆ ನೀವು ಹೆಚ್ಚಿನ ಹಣ ಕೊಡುವಂತೆ ಡಿಮ್ಯಾಂಡ್ ಮಾಡಿದ್ದಿರಿ, ಆದ್ದರಿಂದ ಅವರು ಗೋಡೋನ್ ಒಳಗೆ ನಿಮ್ಮನ್ನು ಲಾಕ್ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಸ್ವಾಮಿ ಎಂಬ ಕಾಂಟ್ರಾಕ್ಟರ್ ಬಂದು, ಅವರು ಸರ್ಕಾರಿ ನೌಕರರಿದ್ದಾರೆ ಆ ರೀತಿ ಮಾಡಬೇಡಿ ಬಿಡಿ ಎಂದು ಹೇಳಿದ್ದರಿಂದ ಅವರ ಮಾತಿಗೆ ಬೆಲೆಕೊಟ್ಟು ನಿಮ್ಮನ್ನು ಬಿಟ್ಟಿದ್ದರು ಎಂದರೆ ಸರಿಯಲ್ಲ. ಅವರ ಮೇಲೆ ನೀವು ಒಂದಲ್ಲಾ ಒಂದು ಕೇಸು ಮಾಡುತ್ತಾ ಬಂದಿದ್ದಿರಿ ಎಂದರೆ ಸರಿಯಲ್ಲ.

8. ಸಾಕ್ಷಿಗೆ ಕೆಲವೊಂದು ದಾಖಲೆಗಳನ್ನ ತೋರಿಸಿ ಇದರಲ್ಲಿರುವ ಸಹಿಗಳು ನಿಮ್ಮವೇ ಎಂದು ತೋರಿಸಿದ್ದು, ಸಾಕ್ಷಿಯು ಇಲ್ಲ ನನ್ನ ಸಹಿಗಳಲ್ಲ ಎನ್ನುತ್ತಾರೆ. ದಿ.05-06-2015 ರಂದು ನೀವು ಸಿಂಧನೂರಿನ ಕಾರ್ಯ ನಿರ್ವಾಹಕ ಅಭಿಯಂತರರು ಎಂದು ಕರ್ತವ್ಯ ನಿರ್ವಹಿಸಿದ್ದೀರಿ, ಇದು ನಿಮ್ಮ ಅವಧಿಯಲ್ಲಿಯೇ ಆಗಿದೆ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ಆ ಕಾಲಕ್ಕೆ ನೀವು ಲೈನ್ ಮ್ಯಾನ್ ಗೋವಿಂದರಾಜ್ ರವರನ್ನು ವರ್ಗಾವಣೆ ಮಾಡಿ, ಮಾಡಸಿರಿವಾರಕ್ಕೆ ಡೆಪ್ಯೂಟ್ ಮಾಡಿದ್ದಿರಿ ಎಂದರೆ ನನಗೆ ನೆನಪಿಲ್ಲ. ಪುನಃ ಅಲ್ಲಿಂದ ಗೋವಿಂದರಾಜು ರವರನ್ನು ಮಾಡಸಿರಿವಾರದಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಿರಿ ಎಂದರೆ ಸರಿಯಲ್ಲ.

9. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಇದರಲ್ಲಿರುವ ಸಹಿ ನಿಮ್ಮದೇ ಎಂದರೆ ಸಾಕ್ಷಿಯು ಅಲ್ಲ ನನ್ನದಲ್ಲ ಎನ್ನುತ್ತಾರೆ. ಅದೇ ತಿಂಗಳಿನಲ್ಲಿ ಮತ್ತೊಂದು ಬಾರಿ ಆತನನ್ನು ಬೇರೊಂದು ಕಡೆಗೆ ವರ್ಗಾವಣೆ ಮಾಡಿದ್ದೀರಿ ಎಂದರೆ ಸರಿಯಲ್ಲ.

10. ಸದರಿ ಗೋವಿಂದ್ ರಾಜು ರವರು ನೀವು ಮಾಡುತ್ತಿರುವ ಕಿರುಕುಳಕ್ಕೆ ಬೇಸತ್ತು, ಮೇಲಾಧಿಕಾರಿಗಳಾದ, ಆ ಕಾಲಕ್ಕೆ ಇದ್ದ ಯೂನಿಯನ್ ಲೀಡರ್ ಆರೋಪಿಗೆ ಅರ್ಜಿ ಬರೆದಿದ್ದರು ಎಂದರೆ ಸರಿಯಲ್ಲ.

11. ಗೆಜೆಟೆಡ್ ಅಧಿಕಾರಿಯ ಕರ್ತವ್ಯಗಳ ಅವಧಿ 2 ವರ್ಷ ಎಂದರೆ ಸಾಕ್ಷಿಯು 5 ವರ್ಷ ಎನ್ನುತ್ತಾರೆ.

12. ಸೋಮಲಾಪುರ ಗ್ರಾಮಕ್ಕೆ ನನ್ನ ಅಣ್ಣನ ಮಗಳನ್ನು ಮದುವೆ ಮಾಡಿಕೊಟ್ಟಿರುತ್ತೇವೆ. ಷಣ್ಮುಕಪ್ಪ ರವರದ್ದು 30 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಪರಮೇಶ್ವರಪ್ಪ ಆ ಏರಿಯಾದ ಇನ್ಚಾರ್ಜ್ ಇದ್ದರು ಎಂದರೆ ಸಾಕ್ಷಿಯು ಅವರಿಗೆ ಪಬ್ಲಿಕ್ ಕಾಂಟ್ಯಾಕ್ಟ್ ಇರಲಿಲ್ಲ ಎನ್ನುತ್ತಾರೆ. ಸದರಿ ನಿಮ್ಮ ಬೀಗರ ಮೇಲೆ ಕೇಸ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪರಮೇಶ್ವರಪ್ಪ ನಿಮ್ಮ ಕುಲಸ್ಥರು ಎಂದರೆ ಸಾಕ್ಷಿಯು ನನಗೆ ಜಾತೀಯತೆ ಎಂಬ ಭಾವನೆ, ಮನುಷ್ಯ ಜಾತಿ ಒಂದೇ ಎನ್ನುವುದು ನನ್ನ ಭಾವನೆ ಎನ್ನುತ್ತಾರೆ. ನಿಮ್ಮ ಶ್ರೀರಕ್ಷೆಯಿಂದ ಅವರ ಮೇಲೆ ಆದ ಡಿ.ಇ. ಯಿಂದ ಉಳಿದುಕೊಂಡಿದ್ದರು ಎಂದರೆ ಸರಿಯಲ್ಲ. ಆತ ಕ್ವಾಟ್ರಸ್‌ನಲ್ಲಿಲ್ಲ ಎಂದರೆ ಸಾಕ್ಷಿಯು ಕೆಲವೊಂದು ಸಲ ಕ್ವಾಟ್ರಸ್‌ನಲ್ಲಿದ್ದ, ಕೆಲವೊಂದು ಸಲ ಹೊರಗಡೆ ಇದ್ದ ಎಂದು ನುಡಿದು ನಂತರದಲ್ಲಿ ನೆನಪಿಲ್ಲ ಎನ್ನುತ್ತಾರೆ. ಆತ ಕ್ವಾಟ್ರಸ್‌ನಲ್ಲಿ ಇದ್ದರೂ ಸಹ ಆತನ ಹೆಚ್ ಆರ್ ಎ ಕಡಿತಗೊಳಿಸಿರಲಿಲ್ಲ ಎಂದರೆ ಸರಿಯಲ್ಲ.

13. ನಿಮ್ಮ ಡಿವಿಜನ್ ಕಛೇರಿಯಲ್ಲಿ ರೂಪ್ಲಾ ನಾಯಕ್ ಎಂಬ ಅಕೌಂಟ್ ಆಫೀಸರ್ ಇದ್ದರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ರೂಪ್ಲಾ ನಾಯಕ್ ರವರ ಮೇಲೆ ವಿಜಿಲೆನ್ಸ್ ರವರು ಬಂದಾಗ ಅವರು ಟ್ರಾಪ್ ಆಗಿದ್ದರು, ನೀವು ಜಿಂಕೆ ತರ ಓಡಿ ಹೋಗಿದ್ದಿರಿ ಎಂದರೆ ಸಾಕ್ಷಿಯು ಅವರ ಮೇಲೆ ಟ್ರಾಪ್ ಆಗಿತ್ತು, ಆದರೆ ನನ್ನ ಮೇಲೆ ಆಗಿತ್ತು ಎಂದು ಹೇಳಿರುವುದು ಸುಳ್ಳು ಎನ್ನುತ್ತಾರೆ. ತದನಂತರ ನೀವು 2 ದಿನ ನಿಮ್ಮ ಮೊಬೈಲನ್ನು ಸ್ವಿಚ್ ಆಫ್ ಮಾಡಿಕೊಂಡು, ಕರ್ತವ್ಯಕ್ಕೆ ಅಬ್ಸೆಂಟ್ ಆಗಿದ್ದಿರಿ ಎಂದರೆ ಸರಿಯಲ್ಲ. ನೀವು & ರೂಪ್ಲಾ ನಾಯಕ್ ರವರು ಹಣ ವಸೂಲಿ ಮಾಡುತ್ತಿದ್ದಿರಿ, ಆದ್ದರಿಂದ ಟ್ರಾಪ್ ಆಗಿತ್ತು ಎಂದರೆ ಸರಿಯಲ್ಲ. ನೀವು ಆ ರೀತಿ ಮಾಡಿರಲಿಲ್ಲವೆಂದರೆ ಅಲ್ಲಿಂದ ಓಡಿ ಹೋಗುತ್ತಿರಲಿಲ್ಲ, ಅಲ್ಲಿಯೇ ಇರುತ್ತಿದ್ದಿರಿ, ನೀವು ತಪ್ಪು ಮಾಡಿದ್ದರಿಂದ ಓಡಿ ಹೋಗಿದ್ದಿರಿ ಎಂದರೆ ಸರಿಯಲ್ಲ.

14. ನಿಮ್ಮ ಸಿಬ್ಬಂದಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಅವರಿಗೆ ದೊರಕಿಸಿಕೊಡುತ್ತಿರಲಿಲ್ಲ, ನೀವೇ ದುರ್ಬಳಕೆ ಮಾಡಿಕೊಳ್ಳುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಿಮ್ಮ ಸಿಬ್ಬಂದಿಗಳು ನಿಮ್ಮ ಮೇಲಾಧಿಕಾರಿಗೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಷಯ ಆ ಅವಧಿಯಲ್ಲಿ ಹಲವಾರು ಪತ್ರಿಕೆಗಳಲ್ಲಿ ಪ್ರಕಟಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

15. ಆ ದಿನ ಗಲಾಟೆಯಾದಾಗ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು 7-8 ಜನ ಎನ್ನುತ್ತಾರೆ. ನನ್ನ ಛೇಂಬರ್‌ನಲ್ಲಿ ನಾನು ಒಬ್ಬನೇ ಇದ್ದೆ. ಸಾಕ್ಷಿಯು ಮುಂದುವರೆದು ನನಗೆ ಅಷ್ಟೋಂದು ನೆನಪು ಬರುತ್ತಿಲ್ಲ ಎನ್ನುತ್ತಾರೆ.

16. ಆರೋಪಿ 4-45 ಕ್ಕೆ ನಮ್ಮ ಕಛೇರಿಗೆ ಬಂದಿದ್ದರು. ನನ್ನ ಛೇಂಬರ್ ಒಳಗೆ ಬಾಗಿಲು ತೆಗೆದು ಬಂದಿದ್ದರು. ಅದು ಅಟೋ ಡೋರ್ ಎಂದರೆ ಸರಿ. ನೀವು ಛೇಂಬರ್ ಒಳಗೆ ಕೂತಿದ್ದಾಗ, ಛೇಂಬರ್ ಒಳಗಡೆ ಏನಾಗುತ್ತಿತ್ತು ಎಂದು ಕಾಣುತ್ತಿವುದಿಲ್ಲ ಎಂದರೆ ಸರಿ. ಆತ ಒಳಗೆ ಬಂದ ತಕ್ಷಣ ಏನಾಯಿತು ಎಂದರೆ ಸಾಕ್ಷಿಯು ಆತ ನನ್ನ ತಲೆಗೆ ಹೊಡೆದನು. ಆತ ನನಗೆ ಎಷ್ಟು ಏಟು ಹೊಡೆದ ಎಂದು ನನಗೆ ಈಗ ನೆನಪಿಲ್ಲ. ಆತ ಮೆಟಲ್ ವಾಚಿನಿಂದ ನನ್ನ ತಲೆಗೆ ಒಂದು ಏಟು ಹೊಡೆದಿದ್ದ, ನನಗೆ ಗಾಯವಾಗಿತ್ತು. ಆಗ ನಾನು ತಪ್ಪಿಸಿಕೊಂಡು ಹೊರಗೆ ಹೋದೆ, ಆತ ನನ್ನ ಅಂಗಿಯನ್ನು ಹಿಡಿದುಕೊಂಡು ಎಳೆದುಕೊಂಡು ಬಂದ. ನಿಮ್ಮನ್ನು ಹೊರಗೆ ಎಳೆದುಕೊಂಡು ಬಂದಾಗ ಎಷ್ಟು ಜನ ಅಲ್ಲಿ ಇದ್ದರು ಎಂದರೆ ಸಾಕ್ಷಿಯು 7-8 ಜನ ಇದ್ದರು ಎನ್ನುತ್ತಾರೆ. ಅವರಲ್ಲಿ ಪರಮೇಶ್ವರಪ್ಪ, ಪ್ರವೀಣ್, ಖಾಜಾ ಮೋಹಿನುದ್ದೀನ್, ಬಸನಗೌಡ & ಶಿವಮೂರ್ತಿ ಕೇಸ್ಪೇದ್-ನಿವೃತ್ತ ಅಕೌಂಟ್ ಶಿರಸ್ತೇದಾರ್ ರವರು ನನ್ನನ್ನು ಬಿಡಿಸಿಕೊಂಡರು. ಪರಮೇಶ್ವರಪ್ಪ ರವರ ಕರ್ತವ್ಯ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಅವರು ಎಲ್ಲೆಲ್ಲಿ ಸಮಸ್ಯೆಗಳಿರುತ್ತವೆಯೋ ಅಲ್ಲಿ ಇರುತ್ತಾರೆ, ಆಗ ಸಂಜೆಯ ವೇಳೆ ಆಗಿದ್ದರಿಂದ ಅವರು ನಮ್ಮ ಕಛೇರಿಗೆ ಬಂದಿದ್ದರು, ಅವರನ್ನು ನಿಗಧಿತ ಸ್ಥಳಕ್ಕೆ ನಿಯೋಜನೆ ಮಾಡುವುದಿಲ್ಲ, ಅವರು ಟೆಕ್ನಿಕಲ್ ಕೆಲಸ ಮಾಡುತ್ತಾರೆ, ಎಲ್ಲಾ ಸ್ಟೇಷನ್‌ಗಳ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ಪ್ರವೀಣ್ ರವರು ಗುತ್ತಿಗೆದಾರ. ಪ್ರವೀಣ್ ರವರು ಸಾಮಾನ್ಯವಾಗಿ ಸಂಜೆ 4 ರಿಂದ 5 ಗಂಟೆಯ ಸುಮಾರಿಗೆ ಕಛೇರಿಗೆ ಬರುತ್ತಾರೆ, ಆ ದಿನ 4-30 ರ ಸುಮಾರಿಗೆ ಬಂದಿದ್ದರು.

17. ಪ್ರವೀಣ್ ಪಟ್ಟಣಶೆಟ್ಟಿರುವರು ಹಲವಾರು ಹೆಚ್ಚಿಗೆ ಗುತ್ತಿಗೆಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆತನ ಬಿಲ್‌ಗಳನ್ನು ನೀವು ತಕ್ಷಣವೇ ಮಾಡಿಕೊಡುತ್ತಿದ್ದಿರಿ, ನಿಲ್ಲಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆತ ನಿಮ್ಮ ಸಂಬಂಧಿಯಾದ ಕಾರಣ ಆತನ ಬಿಲ್ಲನ್ನು ತಕ್ಷಣ ಮಾಡುತ್ತಿದ್ದಿರಿ & ಎಲ್ಲೇ ಕೆಲಸ ಇದ್ದರೂ ಅವರಿಗೆ ನೀವು ಕೊಡುತ್ತಿದ್ದಿರಿ ಎಂದರೆ ಸರಿಯಲ್ಲ.

18. ಘಟನೆಯು 5 ರಿಂದ 5-15 ರವರೆಗೆ ಅಂದರೆ 15 ನಿಮಿಷಗಳ ಕಾಲ ಆಗಿತ್ತು. ಆ ಕಾಲಕ್ಕೆ ಯಾರಾದರೂ ಪೋಲೀಸರಿಗೆ ಘಟನೆಯ ಬಗ್ಗೆ ತಿಳಿಸಿದ್ದರಾ ಎಂದರೆ ಸಾಕ್ಷಿಯು ಇಲ್ಲ, ತಿಳಿಸಿರಲಿಲ್ಲ ಎನ್ನುತ್ತಾರೆ.

19. ನಿಮ್ಮ ಕಛೇರಿಯ ಕೆಳಗಡೆ ಮಾರುತಿಶೋಂ ರೂಂ ಇದೆ, ಅಲ್ಲಿ ಸಾಕಷ್ಟು ಕೆಲಸಗಾರರು ಕೆಲಸ ಮಾಡುತ್ತಿರುತ್ತಾರೆ, ಅವರು ಏನಾದರೂ ಶಬ್ದ ಕೇಳಿ ಬಂದಿದ್ದರಾ ಎಂದರೆ ಸಾಕ್ಷಿಯು ಬಂದಿಲ್ಲ

ಎಂದು ನುಡಿದು ನಂತರ ಗೊತ್ತಿಲ್ಲ ಎನ್ನುತ್ತಾರೆ. ಪೋ.ಠಾ.ಗೆ ನಾನು 10-30 ಕ್ಕೆ ಹೋಗಿದ್ದೆ. ಪೋ.ಠಾ.ಗೆ ನಾನು ಒಬ್ಬನೇ ಹೋಗಿದ್ದೆ, ನನ್ನೊಂದಿಗೆ ಯಾರು ಯಾರು ಬಂದಿದ್ದರು ನನಗೆ ಗೊತ್ತಿಲ್ಲ.

20. ಆ ಕಾಲಕ್ಕೆ ನನಗೆ ಪ್ರಜ್ಞೆ ಇರಲಿಲ್ಲ. ನನ್ನನ್ನು ಆಸ್ಪತ್ರೆಗೆ ಚಂದ್ರಶೇಖರ್ ದೇಸಾಯಿ & ಸಿಬ್ಬಂದಿಗಳು ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಗೆ 6-30 ಕ್ಕೆ ಹೋಗಿದ್ದೆವು. ಆಸ್ಪತ್ರೆಯಲ್ಲಿ ಒಂದೂವರೆಗಂಟೆಗಳ ಕಾಲ ಚಿಕಿತ್ಸೆ ಪಡೆದಿದ್ದೆ.

21. ದೂರನ್ನು ಟೈಪ್ ಮಾಡಿಸಿಕೊಟ್ಟಿದ್ದೆನು. ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆ. ದೂರನ್ನು ಕೈಯಿಂದ ಬರೆದು ಕೊಟ್ಟಿದ್ದೆ ಎಂದು ನುಡಿದು, ನಂತರದಲ್ಲಿ ಯಾರು ಹೇಳಿ ಟೈಪ್ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಠಾಣೆಯಲ್ಲಿ 2 ಗಂಟೆಗಳ ಕಾಲ ಅಂದರೆ 10-30 ರಿಂದ 1 ಗಂಟೆಯ ಕಾಲ ಇದ್ದೆನು.

22. ಪೋಲೀಸರು ನಿಮ್ಮನ್ನು ಎಷ್ಟು ಸಲ ಕರೆಸಿದ್ದರು ಎಂದರೆ ಸಾಕ್ಷಿಯು ಅವರು ಕರೆಸಿರಲಿಲ್ಲ, ನಾನೇ ಹೋಗಿದ್ದೆ ಎನ್ನುತ್ತಾರೆ. ನಾನು ಒಂದು ಬಾರಿ ದೂರು ಕೊಡಲು, ಇನ್ನೊಂದು ಪಂಚನಾಮೆ ಮಾಡಲು ಹೋಗಿದ್ದೆ ಎನ್ನುತ್ತಾರೆ.

23. ಪಂಚನಾಮೆಗೆ ಯಾವಾಗ ಹೋಗಿದ್ದಿರಿ ಎಂದರೆ ಸಾಕ್ಷಿಯು 00.00 ರಿಂದ 1 ಗಂಟೆಯವರೆಗೆ ಪೋ.ಠಾಣೆಯಲ್ಲಿ & ದಿ.27ನೇ ತಾರೀಖಿನಂದು 8 ರಿಂದ 10 ಗಂಟೆಯವರೆಗೆ ಕಛೇರಿಯಲ್ಲಿ ಪಂಚನಾಮೆಗೆಂದು ಹೋಗಿದ್ದೆ. ಪಂಚನಾಮೆಗೆ ಸಾಕ್ಷಿದಾರರನ್ನು ನಾನು ಕರೆದುಕೊಂಡು ಹೋಗಿಲ್ಲ.

24. ವೈ ಮಧುಸೂದನ್ ತಂದೆ ಹಜರತ್ತಯ್ಯ & ಕೆ ರಮೇಶ & ಕೋಟೇಶ್ವರ ರಾವ್ ರವರ ಪರಿಚಯ ಇಲ್ಲ. ಮಧುಸೂದನ್ ರಾವ್ ರವರು ಸೋಲಾರ್ ಕೆಲಸ ಮಾಡುತ್ತಿದ್ದ, ಆತನಿಗೆ ಸೋಲಾರ್ ಪರ್ಮಿಷನ್ ನೀವೇ ಕೊಡಿಸಿದ್ದಿರಿ ಎಂದರೆ ನನಗೆ ನೆನಪಿಲ್ಲ. ಸದರಿ ಸೋಲಾರ್ ಸ್ಕೀಮ್ ನಲ್ಲಿ ನೀವೂ ಸಹ ಪಾಲುದಾರರಿದ್ದಿರಿ ಎಂದರೆ ಸರಿಯಲ್ಲ. ನೀವು ಯಾವ ಕಾರಣಕ್ಕಾಗಿ ಸೋಲಾರ್ ಸ್ಕೀಮ್ ನಲ್ಲಿ ಸಸ್ಪೆಂಡ್ ಆಗಿದ್ದಿರಿ ಎಂದರೆ ಸಾಕ್ಷಿಯು ಕರ್ನಾಟಕದಾದ್ಯಂತ ಹಲವಾರು ಅಭಿಯಂತರರನ್ನು ಸಸ್ಪೆಂಡ್ ಮಾಡಿದ್ದಿರಿ ಎನ್ನುತ್ತಾರೆ. ನೀವು ಸದರಿ ಸೋಲಾರ್ ಸ್ಕೀಮ್‌ನಲ್ಲಿ ಉಳಿದ ಪಾಲುದಾರರೊಂದಿಗೆ ಶಾಮೀಲಾಗಿ ಹಣ ದುರ್ಬಳಕೆ ಮಾಡಿಕೊಂಡಿದ್ದಿರಿ, ಆದ್ದರಿಂದ ಸಸ್ಪೆಂಡ್ ಆಗಿದ್ದಿರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಪಿಡಬ್ಲೂ: 1** **ಸಿ.ಸಿ ನಂ.860/2016**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**